ಅ) ಮೈಸೂರು ನಗರದ ಕುವೆಂಪುನಗರ ಬಡಾವಣೆಯಲ್ಲಿ ರಾಮಕೃಷ್ಣನಗರಕ್ಕೆ ಹೋಗುವ ಮಾರ್ಗದಲ್ಲಿ ಕರ್ನಾಟಕ ಗೃಹ ಮಂಡಳಿಗೆ ಸೇರಿದ ಪ್ರದೇಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಪ್ರಶಸ್ತವಾದ ಈ ಪ್ರದೇಶವನ್ನು ಯಾವ ಉದ್ದೇಶಕ್ಕೆ ಕಾದಿರಿಸಲಾಗಿದೆ;

ಆ) ಈ ಪ್ರದೇಶದಲ್ಲಿ ಗೃಹ ಮಂಡಳಿಯು ಮನೆಗಳನ್ನು ಕಟ್ಟಲು ಇರುವ ತೊಂದರೆ ಏನು;

ಇ) ಮೂಲ ಯೋಜನೆಗೆ ವಿರುದ್ಧವಾಗಿ ನಿವೇಶನಗಳನ್ನು ಮಾರಾಟ ಮಾಡಲಾಗಿದೆಯೇ; ಹೌದಾದರೆ ಯಾರು ಯಾರಿಗೆ ಮಾರಾಟ ಮಾಡಲಾಗಿದೆ; ಇದರಿಂದ ಎಷ್ಟು ಆದಾಯ ಬಂದಿದೆ;

ಈ) ಇಲ್ಲಿ ಮನೆಗಳನ್ನು ಯಾವಾಗ ಕಟ್ಟಿ ವಿತರಣೆ ಮಾಡಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಮೈಸೂರು ನಗರದ ಕುವೆಂಪುನಗರ ಬಡಾವಣೆಯಲ್ಲಿ ರಾಮಕೃಷ್ಣ ನಗರಕ್ಕೆ ಹೋಗುವ ಮಾರ್ಗದಲ್ಲಿ ಕರ್ನಾಟಕ ಗೃಹ ಮಂಡಳಿಗೆ ಸೇರಿದ ಪ್ರದೇಶವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಪ್ರಶಸ್ತವಾದ ಪ್ರದೇಶವನ್ನು ಶಾಲೆ, ಸಮುದಾಯ ಭವನ ಹಾಗೂ ಉದ್ಯಾನವನಕ್ಕಾಗಿ ಕಾದಿರಿಸಲಾಗಿದೆ ಮತ್ತು ಶಾಲೆ ಹಾಗೂ ಸಮುದಾಯ ಭವನಕ್ಕೆ ಕಾದಿರಿಸಲಾಗಿದೆ ಮತ್ತು ಶಾಲೆ ಹಾಗೂ ಸಮುದಾಯ ಭವನಕ್ಕೆ ಕಾದಿರಿಸಿದ ಜಾಗವನ್ನು ಮಂಡಳಿವತಿಯಿಂದ ಹಂಚಿಕೆ ಮಾಡಲಾಗಿದೆ. ಉಳಿದ ಉದ್ಯಾನವನದ ಜಾಗವನ್ನು ಕಾದಿರಿಸಲಾಗಿದೆ.

ಆ) ಈ ಮೇಲಿನ ಪ್ರದೇಶವನ್ನು ಸಾರ್ವಜನಿಕರ ಉದ್ದೇಶಕ್ಕಾಗಿ ಮತ್ತು ಉದ್ಯಾನವನಕ್ಕಾಗಿ ಕಾದಿರಿಸಿರುವುದರಿಂದ ಮನೆಗಳನ್ನು ಕಟ್ಟಲು ಬರುವುದಿಲ್ಲ.

ಇ) ಕರ್ನಾಟಕ ಗೃಹ ಮಂಡಳಿಯ ನಿಯಮದ ವಿರುದ್ಧವಾಗಿ ನಿವೇಶನಗಳನ್ನು ಯಾರಿಗೂ ಮಾರಾಟ ಮಾಡಲಾಗಿರುವುದಿಲ್ಲ. ಆದುದರಿಂದ ಆದಾಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 'ಅ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ಮತ್ತು ಚಾಮರಾಜನಗರದ ಜಿಲ್ಲೆಗಳಲ್ಲಿನ ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆ

1724 (2055) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಾಡಲಾದ ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆಗಳು ಎಷ್ಟು, ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು;

ಆ) ಬೇಜವಾಬ್ದಾರಿಯಿಂದ ಈ ಯೋಜನೆಯಡಿಯಲ್ಲಿ ಶಸ್ತ್ರ ಚಿಕಿತ್ಸೆ ಮಾಡುವಾಗ ಮರಣ ಹೊಂದಿದ ಎಷ್ಟು ಪ್ರಕರಣಗಳು ವರದಿಯಾಗಿದೆ ಅವು ಯಾವುವು ಮತ್ತು ಯಾವ ದಿನಾಂಕದಂದು ನಡೆದಿದೆ.

ಇ) ತಪ್ಪಿತಸ್ತ ವೈದ್ಯರು ಮತ್ತು ಸಿಬ್ಬಂದಿ ಯಾರು; ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಮೃತಪಟ್ಟ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ; ಹೌದಾದರೆ ವಿವರ ಕೊಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು)

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ 75,555 ಮತ್ತು 23,177 ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆಗಳನ್ನು 1999-2000 ರಿಂದ 2001-2002ರವರೆಗೆ ನಡೆಸಲಾಗಿದೆ. ವಿವರ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಜಿಲ್ಲೆ	1999-2000	2000-2001	2001-2002	ಒಟ್ಟು
1	ಮೈಸೂರು	24,635	25,629	25,291	75,555
2	ಚಾಮರಾಜನಗರ	7,980	7,990	7,207	23,177

ಆ) ಶಸ್ತ್ರ ಚಿಕಿತ್ಸೆ ಸಮಯದಲ್ಲಿ ಬೇಜವಾಬ್ದಾರಿಯಿಂದ ಮರಣ ಹೊಂದಿದ ಪ್ರಕರಣಗಳು ಇದುವರೆವಿಗೂ ವರದಿಯಾಗಿರುವುದಿಲ್ಲ. ಆದರೆ ಕಳೆದ ಮೂರು ವರ್ಷಗಳಲ್ಲಿ, ಬೇರೆ ಕಾರಣಗಳಿಗೆ ಮೈಸೂರಿನಲ್ಲಿ ಇಬ್ಬರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಒಬ್ಬರು ಮರಣ ಹೊಂದಿರುತ್ತಾರೆ.

ಕ್ರಮ ಸಂಖ್ಯೆ	ಜಿಲ್ಲೆ	ಹೆಸರು	ಮರಣ ಹೊಂದಿದ ದಿನಾಂಕ
1	ಮೈಸೂರು	1. ಶ್ರೀಮತಿ ಮಂಗಳಮ್ಮ ಕೋಂ ಜವರೇಗೌಡ	26-6-2000
		2. ಶ್ರೀಮತಿ ವಸಂತ ಕೋಂ ಕುಮಾರ	26-11-2001
2	ಚಾಮರಾಜನಗರ	1. ಶ್ರೀಮತಿ ಪುಷ್ಪವತಿ ಕೋಂ ವೃಷಬೇಂದ	11-10-2001

ಇ) ಉದ್ಭವಿಸುವುದಿಲ್ಲ.

ಈ) ಹೌದು, ಪ್ರತಿ ಕುಟುಂಬಕ್ಕೆ ರೂ. 50,000/- ರಂತೆ ಎರಡು ಪ್ರಕರಣಗಳಿಗೆ ರೂ. 1,00,000/- ಪರಿಹಾರ ನೀಡಲಾಗಿದೆ, ಒಂದು ಪ್ರಕರಣದಲ್ಲಿ ಪೂರ್ಣ ದಾಖಲಾತಿಗಳು ಸ್ವೀಕೃತವಾಗಿಲ್ಲ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಮತಿ ರಹಿತ ಶಾಲೆಗಳು

1725 (2056) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಮತಿ ಪಡೆಯದ ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಯಾವುವು;

ಆ) ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗದಂತೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಡೊನೇಷನ್ ಪಿಡುಗನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳೇನು?

ಈ) ಮೈಸೂರು ಜಿಲ್ಲೆಯಲ್ಲಿ ಖಾಸಗಿ ಕ್ಷೇತ್ರದಲ್ಲಿ ಡೊನೇಷನ್ ಪಡೆಯದೆ ಕೆಲಸ ಮಾಡುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಯಾವುವು?